ಇನ್ನೊಂದು ಬೀಡಿಯನ್ನು ಹಚ್ಚಿಕೊಂಡು ಕುಳಿತು ಆಲೋಚನಾಮಗ್ನನಾದ. ಆದರೆ, ಸಂಪಿಗಮ್ಮನಿಗೆ ತನ್ನ ಮೈದುನನ ಮಾತು ಕೇಳಿ ಮನದಲ್ಲಿ ಎಂತಹುದೋ ರೋಷ ಉಕ್ಕಿ ಅವಳ ಮುಖ ಕೆಂಪಗಾಯಿತು. 'ಸರಿ ಕರೆದುಕೊಂಡು ಬಂದು ಬಿಡಪ್ಪಾ... ಎಷ್ಟಾದರೂ ಅದು ನಾನು ಹೆತ್ತಮಗು... ಕಷ್ಟವೋ ಸುಖವೋ ನಾನೇ ಎಲ್ಲಾ ಮಕ್ಕಳನ್ನೂ ಸಾಕಿದಂತೆ ಅದನ್ನೂ ಸಾಕಿಕೊಳ್ಳುತ್ತೀನಿ... ಇಲ್ಲೇ ಆಲಪ್ಪನ ಗುಡ್ಡೆಯಲ್ಲಿ ಒಳ್ಳೆಯ ಇಂಗ್ಲೀಷು ಸ್ಕೂಲು ಆಗಿದೆಯಂತೆ... ಅಲ್ಲೇ ಸೇರಿಸಿ ಓದಿಸ್ತೀನಿ' ಎಂದು ದೃಢವಾದ ದನಿಯಲ್ಲಿ ತನ್ನ ಅತ್ತಿಗೆ ನುಡಿದದ್ದು ಕಂಡು ಕೇಶವ ದೊಡ್ಡದೊಂದು ನಿಟ್ಟುಸಿರುಬಿಟ್ಟ. 'ಸರಿ... ಮುಂದಿನ ಭಾನುವಾರ ಕರೆದುಕೊಂಡು ಬರುತ್ತೇನೆ' ಎಂದು ಹೇಳಿ ಎದ್ದವನನ್ನು ಅಣ್ಣನಾಗಲೀ ಅತ್ತಿಗೆಯಾಗಲೀ ತಡೆಯಲಿಲ್ಲ. ಊಟ ಮಾಡಿಕೊಂಡು ಹೋಗುವೆಯಂತೆ ಇರು ಎಂದೂ ಹೇಳಲಿಲ್ಲ. ಹೊಸ್ತಿಲು ದಾಟುತ್ತಿದ್ದವನು ಅಲ್ಲಿಯೇ ನಿಂತು 'ಇನ್ನೊಂದು ವಿಷಯ... ಸುನಂದಾಳಿಗೆ ನಾವೇ ಕಳುಹಿಸುತ್ತಿದ್ದೇವೆಂದು ತಿಳಿಯೋದು ಬೇಡ... ಬೇಜಾರು ಮಾಡಿಕೊಂಡುಬಿಡುತ್ತಾಳೆ... ದಯವಿಟ್ಟು ನಾವೇ ಕರೆಸಿಕೊಂಡೆವು ಎಂದು ಹೇಳಿಬಿಡಿ...' ಎಂದು ಒಂದು ಕ್ಷಣ ಅಲ್ಲಿಯೇ ತಲೆತಗ್ಗಿಸಿ ನಿಂತುಕೊಂಡ. ಯಾರೂ ಮಾತನಾಡಲಿಲ್ಲ. ನಿಧಾನವಾಗಿ ಹೊರಗೆ ಹೊರಟ. ಪ್ರತಿಬಾರಿಯೂ 'ಹೋಗಿಬರುತ್ತಿಯಾ ಚಿಕ್ಕಪ್ಪಾ...' ಎಂದು ಬಾಯಿತುಂಬಾ ಕೇಳಿ ಬೀಳ್ಕೊಡುತ್ತಿದ್ದ ಅಣ್ಣನ ಮಕ್ಕಳೂ ಮನೆಯಿಂದ ಹೊರಗೆ ಬರಲಿಲ್ಲ.

ಬೇಸರದಿಂದಲೇ ಮನೆಗೆ ಬಂದು ಬಾಗಿಲು ಬಡಿದ ಕೇಶವನನ್ನು ಕಂಡು ಸುನಂದಾ 'ಯಾಕೆ ಡ್ಯಾಡಿ ಡಲ್ ಆಗಿದ್ದೀರಿ... ಮಮ್ಮೀನೂ ಪಾಪೂನೂ ಮಲಗಿದ್ದಾರೆ... ಊಟ ಮಾಡಿ ಬನ್ನಿ...' ಎಂದು ಕಾಳಜಿ ತೋರಿದಾಗ ಅವನ ಎದೆಯಲ್ಲಿ ಏನೋ ಚುಚ್ಚಿದಂತೆ ಭಾಸವಾಯಿತು. 'ಊರಿನಲ್ಲಿ ಊಟ ಮಾಡಿಕೊಂಡೇ ಬಂದೆ...' ಎಂದು ಸುಳ್ಳು ಹೇಳಿ ಸೋಫಾದ ಮೇಲೆ ಕುಸಿದು ಕುಳಿತುಬಿಟ್ಟ.

ಅಂದು ರಾತ್ರಿ ಲಕ್ಷ್ಮಿ ಮತ್ತು ಕೇಶವ ಇಬ್ಬರೂ ಸುನಂದಾಳನ್ನೂ ಮಧ್ಯೆ ಕೂರಿಸಿಕೊಂಡು ಸೋಫಾದಲ್ಲಿ ಕುಳಿತರು. 'ಸುನೀ... ಈವತ್ತು ಊರಿಗೆ ಹೋಗಿದ್ದೆನಲ್ಲಾ.. ನಿಮ್ಮ ಅಪ್ಪಅವ್ವ ಸುನಂದಾಳನ್ನು ಊರಿಗೆ ಕರೆದುಕೊಂಡುಬಂದು ಬಿಟ್ಟುಬಿಡು... ಇಲ್ಲೇ ಹೈಸ್ಕೂಲಿಗೆ ಸೇರಿಸುತ್ತೇವೆ ಎಂದು ಹೇಳಿದರು...' ಎಂದ ಕೇಶವನ ದನಿ ಅವನಿಗೆ ಅರಿವಿಲ್ಲದಂತೆಯೇ ನಡುಗುತ್ತಿತ್ತು. ತನ್ನ ತಂದೆಯ ಮಾತನ್ನು ಕೇಳಿದ ಸುನಂದಾಳಿಗೆ ತೀವ್ರ ಆಘಾತವಾಯಿತು. 'ನೋ ಡ್ಯಾಡಿ ನೋ... ನಾನು ನಿಮ್ಮನ್ನೂ ಮಮ್ಮೀನೂ ಬಿಟ್ಟು ಎಲ್ಲೂ ಹೋಗಲ್ಲ...' ಎಂದು ಮಗುವಿನಂತೆ ತಲೆ ಅಲ್ಲಾಡಿಸಿ ಕಣ್ಣುಗಳಲ್ಲಿ ನೀರು ತುಂಬಿಕೊಂಡದ್ದನ್ನು ಕಂಡು ಲಕ್ಷ್ಮಿ ಕೇಶವ ಇಬ್ಬರಿಗೂ ತೀವ್ರ ಕಸಿವಿಸಿಯಾಯಿತು. 'ಹಂಗದ್ರೆ ಆಗುತ್ತಾ ಸುನೀ... ಅವರು ನಿನ್ನ ಅಪ್ಪಅವ್ವ... ಅವರು ಕಳಿಸಿಕೊಡಿ ಅಂದ್ರೆ ನಾವು ಇಲ್ಲ ಅನ್ನೋದಿಕ್ಕೆ ಆಗುತ್ತದಾ...' ಎಂದ ಲಕ್ಷ್ಮಿಯ ಮಾತಿನಿಂದ ನಿರಾಶಳಾಗಿ ಸುನಂದಾ ಜೋರಾಗಿ ಅಳತೊಡಗಿದಳು. 'ಮಮ್ಮೀ ಪ್ಲೀಸ್... ಡ್ಯಾಡಿ ಪ್ಲೀಸ್... ನನ್ನನ್ನ ಕಳಿಸಬೇಡಿ... ನಾನು ಬೇಕಾದ್ರೆ ಸ್ಕೂಲಿಗೂ ಹೋಗೋದಿಲ್ಲ... ಇಲ್ಲೇ ನಿಮ್ಮ ಜೊತೆ ಇರ್ತೀನಿ... ಮಮ್ಮೀಗೆ ಹೆಲ್ಪ್ ಮಾಡಿಕೊಂಡು ಪಾಪೂನ್ನೂ ನೋಡಿಕೊಂಡು ಇರ್ತೀನಿ...' ಎಂದು ಸುನಂದಾ ರೋದಿಸುತ್ತಾ ಪರಿಪರಿಯಾಗಿ ಬೇಡಿಕೊಂಡರೂ ಲಕ್ಷ್ಮಿ ಕೇಶವರ ಮನಸ್ಸುಗಳು ಕರಗಲಿಲ್ಲ. 'ಸ್ವಲ್ಪ ದಿನ ಹೋಗಿ ಇರು... ನಿನಗೆ ಅಡ್ಜಸ್ಟು ಆಗದೇ ಹೋದರೆ ಮತ್ತೆ ಬರುವೆಯಂತೆ...' ಎಂದು ಕೇಶವ ಮೆಲುವಾಗಿ ನುಡಿದು ಒಲೈಸಿದರೂ ಸುನಂದಾ 'ನಾನು